(*b*) the number of houses so gutted by fire;

(*c*) whether any relief has been granted to those whose houses were gutted;

(*d*) whether any grants have been sanctioned to them for construction of houses;

(*e*) whether any petitions have been received from persons so affected by fire requesting Government to take up a scheme to build for them houses at a cost of Rs. 300 each?

A.—**Sri A. G. RAMACHANDRA RAO** (Minister for Law and Education) [On behalf of Sri K. Hanumanthaiya (Chief Minister)].—

(*a*) 22nd February 1950.

(*b*) Fourteen houses.

(*c*) A cash grant of Rs. 120 has been distributed.

(*d*) Yes. Two of them were given Rs. 300 each.

(*e*) Four petitions have been received and are being considered.

ಶ್ರೀ ಎ. ಮುನಿಯಪ್ಪ.—14 ಮನೆಗಳು ಸುಟ್ಟು ಹೋದವೆಂದು ಉತ್ತರ ಕೊಡಲಾಗಿದೆ; ಇದಾದ ಮೂರು ತಿಂಗಳಲ್ಲಿ 50 ಮನೆಗಳು ಸುಟ್ಟುಹೋಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎ. ಮುನಿಯಪ್ಪ.—120 ರೂಪಾಯಿಗಳ ಪರಿಹಾರ ಕೊಟ್ಟರೆ ಸರಿಮಾಡಿಸುವುದಕ್ಕೆ ಸಾಧ್ಯವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಷ್ಟು ಸಾಧ್ಯ, ಎಷ್ಟು ಅವಶ್ಯಕ ಎಂಬುದನ್ನೆಲ್ಲ ನೋಡಿ ಕೊಟ್ಟಿದ್ದಾರೆ.

ಶ್ರೀ ಎ. ಮುನಿಯಪ್ಪ.—ಇಬ್ಬರಿಗೆ 300 ರೂಪಾಯಿಗಳಂತೆ ಕೊಟ್ಟಿದ್ದಾರೆ. ಅವರಿಗೆ ಫೈನಲ್ ಬಿಲ್ ಆಗಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಿಲ್‌ಮೇಲೆಯೇ ಕೊಟ್ಟಿದ್ದಾರೆಂದು ನನ್ನ ಭಾವನೆ.

ಶ್ರೀ ಎ. ಮುನಿಯಪ್ಪ.—ಮನೆಕಟ್ಟಿ ಪೂರ್ತಿಮಾಡಿ ಒಂದು ವರ್ಷವಾದರೂ ಇನ್ನೂ 50 ರೂಪಾಯಿ ಕೊಡದೆ ಬಾಕಿ ಇಟ್ಟುಕೊಂಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಇರಬಹುದು, ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎ. ಮುನಿಯಪ್ಪ.—ನಾಲ್ಕು ಅರ್ಜಿಗಳು ಬಂದಿವೆ ಎಂದು ಉತ್ತರ ಕೊಡಲಾಗಿದೆ, ಅಮಲ್ದಾರರು ಈ ವಿಚಾರದಲ್ಲಿ ಇನ್ನೂ ಗಮನಕೊಡದೇಯಿರಲು ಕಾರಣವೇನು?

ಶ್ರೀ ಎ. ಜಿ. ರಾಮಚಂದ್ರರಾವ್.—ಗಮನ ಕೊಡುತ್ತಿದ್ದಾರೆಂದು ಹೇಳಿದೆ. ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ಎ. ಮುನಿಯಪ್ಪ.—1951ರಲ್ಲಿ ಮನೆಗಳಿಗಾಗಿ ಗ್ರ್ಯಾಟು ಮಂಜೂರಾಗಿ ಗಂಜಿಗುಂಟೆಯಲ್ಲಿ ವಹಿವಾಟು ಮಾಡಿದ್ದು ಗೊತ್ತಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಎ. ಮುನಿಯಪ್ಪ.—ಸಾಧ್ಯವಾದಷ್ಟು ಮನೆಗಳನ್ನು ಕಟ್ಟುವುದಕ್ಕೆ ಸರ್ಕಾರದ ಅಭಿಪ್ರಾಯವೇನು?

ಶ್ರೀ ಎ. ಜಿ. ರಾಮಚಂದ್ರರಾವ್.—ಆದಷ್ಟು ಜಾಗ್ರತೆ ಪರಿಹಾರ ಕಾರ್ಯ ನಡೆಯಬೇಕೆಂಬುದೇ ಸರ್ಕಾರದ ಅಭಿಪ್ರಾಯ.

Gopala Rao Enquiry Committee.

Q.—355. **Sri Mulka GOVINDA REDDY** (Chitaldrug).—

Will the Government be pleased to state:—

(*a*) when the Gopal Rao Enquiry Committee was formed and who the members of the Committee were;

(*b*) what the finding of that Committee is;

(*c*) who the persons are that had invested money with Sri Gopal Rao (names and amounts to be given);

(*d*) the amounts that have been paid to the investors and at what percentage;

(*e*) whether investors have been asked to pay income-tax and penalty for money invested by them;

(*f*) the action they have taken on the recommendations of the Committee; if not, what will they propose to do;

(*g*) whether they will place that report before the Assembly?

A.—**Sri A. G. RAMACHANDRA RAO** (Minister for Law and Education [on behalf of Sri K. Hanumanthaiya (Chief Minister)].—

(*a*) The Gopala Rao Enquiry Committee was formed on 25th February 1948 with the following members:—

1. Sri P. Medapa (now Chief Justice of Mysore).
2. Sri S. Nijalingappa.
3. Sri T. Subramanya.

(*b*) It will not be in the interests of the public to publish this at present.

(*c*) It will not be in the interests of the public to publish this list at present.

(*d*) The Committee paid 6 annas in the rupee uniformly to all the depositors.

(SRI A. G. RAMACHANDRA RAO.)

(*e*) This matter is under consideration of the Income-Tax Department of the Government of India.

(*f*) Appropriate action has been taken in individual cases.

(*g*) Not for the present.

Sri Mulka G VINDA REDDY.—What is the total amount invested with Mr Gopala Rao?

Sri A. G. RAMACHANDRA RAO.—I have got the information, I will give it to you. Please put the next question.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಎಷ್ಟುಮಂದಿ ಅವರಲ್ಲಿ ಡಿಪಾಜಿಟ್ ಮಾಡಿದ್ದರು?

ಶ್ರೀ ಎ. ಜಿ ರಾಮಚಂದ್ರರಾವ್.—ನೋಟೀಸ್.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅವರಲ್ಲಿ ಅಧಿಕಾರಿಗಳೆಷ್ಟು, ಖಾಸಗಿ ಜನರೆಷ್ಟು?

ಶ್ರೀ ಎ. ಜಿ. ರಾಮಚಂದ್ರರಾವ್.—ಬಾಕಿ ವಿಷಯವನ್ನು ನದ್ಯಕ್ಕೆ ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅಧಿಕಾರಿಗಳು ಅವರಲ್ಲಿ ಹಣ ಇಟ್ಟಿದ್ದರೆ ಅವರಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಎ. ಜಿ ರಾಮಚಂದ್ರರಾವ್.—ಯಾವ ಯಾವುದು ಸೂಕ್ತವೋ ಅದನ್ನು ತೆಗೆದುಕೊಂಡಿದ್ದಾರೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಲಂಚನಿರೋಧ ಇಲಾಖೆಯವರು ಅವರಮೇಲೆ ಕಾರ್ಯಕ್ರಮ ತೆಗೆದುಕೊಂಡಿದ್ದಾರೆಯೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರಿಗೂ refer ಮಾಡಿದೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅಧಿಕಾರಿಗಳ ಪೈಕಿ ಈ ಸಂಬಂಧದಲ್ಲಿ ಯಾರಾದರೂ 'ಡಿಸ್‌ಮಿಸ್' ಆಗಿದ್ದಾರೆಯೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ರಹಸ್ಯವಾದ ವಿಚಾರ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ರೂಪಾಯಿಗೆ ಆರಾಣೆ ದಾಮಾಷಾ ಕೊಡಲಾಗಿದೆಯೆಂದು ಹೇಳಿದೆ, ಈ ಮೊಬಲಗು ಅಸಲು ಬಡ್ಡಿ ಎಲ್ಲದರ ಮೇಲೆ ಕೊಟ್ಟಿದೆಯೆ?

ಶ್ರೀ ಎ. ಜಿ. ರಾಮಚಂದ್ರರಾವ್—ಅಸಲನಲ್ಲಿ ಆರಾಣೆ ಭಾಗ ಕೊಟ್ಟಿನೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅಸೆಂಬ್ಲಿಯಲ್ಲಿ ಒಂದು ನಿರ್ಣಯವಾಗಿ ಅದರ ಪ್ರಕಾರ ಆ ಸಮಿತಿಯು ನೇಮಕವಾಗಲಿಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

9 P.M.

Sri Mulka GOVINDA REDDY.—So, you are in duty bound to place it before the Assembly, is it not, Sir?

Sri A. G. RAMACHANDRA RAO.—Yes, at the appropriate time.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಇನ್ನೂ ಎಷ್ಟು ಕಾಲ ಬೇಕಾಗುತ್ತದೆ?

ಶ್ರೀ ಎ. ಜಿ. ರಾಮಚಂದ್ರರಾವ್.—ನಿರ್ದಿಷ್ಟವಾಗಿ ಹೇಳಲುವುದಕ್ಕೆ ಸಾಧ್ಯವಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಆ ಸಮಿತಿಯ ಎಷ್ಟು ಸಿಟ್ಟಿಂಗ್ಸ್ ಆಗಿದೆಯೆಂಬುದನ್ನು ಹೇಳಲು ಸಾಧ್ಯವೆ?

Sri A. G. RAMACHANDRA RAO.—I shall see.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಆ ಸಮಿತಿಯ ನದಸ್ಯರು ಎಷ್ಟು ಪ್ರಯಾಣ ಭತ್ಯವನ್ನು ಪಡೆದಿದ್ದಾರೆ?

Sri A. G. RAMACHANDRA RAO.—I will give you all the figures.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಒಟ್ಟು ಈ ಸಮಿತಿಗಾಗಿ ಆಗಿರುವ ಖರ್ಚೆಷ್ಟು?

Sri A. G. RAMACHANDRA RAO.—That information I cannot give.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಈ ಗೋಪಾಲರಾವಿಗೆ ಹಿಂದೆ ಧರ್ಮರತ್ನಾಕರ ಎಂದು ಬಿರುದು ಕೊಟ್ಟಿತ್ತಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅದು ಈಗಲೂ ಇದೆಯೋ ಅಥವಾ ತೆಗೆದುಹಾಕಿದ್ದೀರೋ?

Sri A. G. RAMACHANDRA RAO.—No further information I could give on that subject.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಈಗ ಅವರೇನು ಮಾಡುತ್ತಿದ್ದಾರೆ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್. We will collect the information and give you.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅವರ ಸಂಸಾರದವರಿಗೆ ಪರಿಹಾರವೇನಾದರೂ ಕೊಡುತ್ತಿದ್ದೀರಾ? ಈ ಅಸೆಂಬ್ಲಿ ಮುಂದೆ ಅದನ್ನು, ಅಂದರೆ, ಈಗ ಕೇಳಿರುವ ವಿವರಗಳನ್ನು ಯಾವಾಗ ಇಡುತ್ತೀರಿ?

ಶ್ರೀ ಎ. ಜಿ. ರಾಮಚಂದ್ರರಾವ್.—ಆದಷ್ಟು ಬೇಗ ಎಲ್ಲಾ ಇತ್ಯರ್ಥವಾದ ಮೇಲೆ ಅವಕಾಶವಾಗಬಹುದು.

ಶ್ರೀ ಪಿ. ಆರ್. ರಾವಯ್ಯ.—ಈ ಸಮಿತಿ ಯಾವಾಗ ನೇಮಕವಾಯಿತು? ಎಷ್ಟು ಕಾಲ ಕೆಲಸ ಮಾಡಿತು? ಈಗ ಪೈಂಡಪ್ ಆಯಿತೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಮಿತಿಯ ಕೆಲಸ ಪೈಂಡಪ್ ಆಗಿದೆ.

ಶ್ರೀ ಪಿ. ಆರ್. ರಾಮಯ್ಯ.—(*g*) ಪ್ರಶ್ನೆಗೆ ಉತ್ತರವಾಗಿ 'not for the present' ಎಂದು ಹೇಳೋಣವಾಗಿದೆ. ಅಂದರೆ ಪಬ್ಲಿಷ್ ಮಾಡುವುದಕ್ಕೆ ಎಷ್ಟು ಕಾಲ ಹಿಡಿಯುತ್ತದೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಆದಷ್ಟು ಹಾಗ್ರತೆ ಪಬ್ಲಿಷ್ ಮಾಡಬೇಕೆಂದಿದೆ. ಇಷ್ಟು ಕಾಲ ಬೇಕೆಂದು ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಪಬ್ಲಿಷ್ ಮಾಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಕ್ಸಾಮಿನ್ ಮಾಡುತ್ತೇವೆ.

ಶ್ರೀ ಪಿ. ಆರ್. ರಾಮಯ್ಯ.—ಈ ಸಮಿತಿ ಏರ್ಪಾಡಾದಾಗಿನಿಂದ ಸರ್ಕಾರ ಇದಕ್ಕಾಗಿ ವೆಚ್ಚಮಾಡಿರುವ ಹಣವೆಷ್ಟು?

ಶ್ರೀ ಎ. ಜಿ. ರಾಮಚಂದ್ರರಾವ್.—ಆಮೇಲೆ ಹೇಳುತ್ತೇನೆ.

ಶ್ರೀ ಪಿ. ಆರ್. ರಾಮಯ್ಯ.—ಕಂಟೆಪ್ಟ್ ಆಫ್ ಕೋರ್ಟ್ ಕೇಸಿಗಾದ ಖರ್ಚು ಸೇರಿ ಒಟ್ಟು ಎಷ್ಟಾಯಿತು?

ಶ್ರೀ ಎ. ಜಿ. ರಾಮಚಂದ್ರರಾವ್.—ಈಗ ಏವರವನ್ನು ಹೇಳಲು ಸಾಧ್ಯವಿಲ್ಲ, ಬೇಕಾದರೆ ಪಬ್ಲಿಷ್ ಮಾಡಿದ ಮೇಲೆ ನೋಡಬಹುದು. ಪ್ರೊಸಿಡಿಂಗ್ಸ್‌ನಲ್ಲಿರುವುದನ್ನು ಕೊಡುತ್ತೇನೆ. ಯಾವ ಯಾವ ಇಲಾಖೆಗಳಲ್ಲಿ ಸಪ್ಲಿಮೆಂಟರಿಯಾಗಿ ಖರ್ಚು ಮಾಡಿರುವುದೆಷ್ಟು ಎಂಬುದನ್ನು ವರದಿ ಬಂದಮೇಲೆ ಶೇಖರಿಸಿ ಇಕ್ಷಫರ್ಮೇಷ್ ಕೊಡಲಾಗುತ್ತದೆ.

ಶ್ರೀ ಪಿ. ಆರ್. ರಾಮಯ್ಯ.—ಈಗ ಆರಾಣಿ ಮಾತ್ರ ಇನ್‌ವೆಸ್ಟ್ ಮಾಡಿರುವವರಿಗೆ ಬಂದಿರುವ ದೃಷ್ಟಿಯಿಂದ ಇಷ್ಟು ಹೆಚ್ಚಾದ ಹಣ ಖರ್ಚಾದುದು ಸರಿಯಲ್ಲವೆಂದು ಸರ್ಕಾರಕ್ಕೆ ಭಾವನೆ ಬಂದಿದೆಯೆ ?

ಅಧ್ಯಕ್ಷರು.—ಎಷ್ಟು ಹಣ ಖರ್ಚಾಗಿದೆಯೆಂದು ಅವರು ಹೇಳಿಲ್ಲ.

ಶ್ರೀ ಎ. ಜಿ. ರಾಮಚಂದ್ರರಾವ್.—ಸುಮಾರು 2,35,50,000 ರೂಪಾಯಿಗಳಷ್ಟು ಹಣ ಇನ್‌ವೆಸ್ಟ್ ಆಗಿತ್ತು.

Sri K. PUTTASWAMY.—Did Government acquire any property as a result of this enquiry, Sir ?

Sri A. G. RAMACHANDRA RAO.—Government has purchased some property.

Sri K. PUTTASWAMY.—What are those properties that Government purchased, Sir ?

Sri A. G. RAMACHANDRA RAO.—Some buildings.

Sri K. PUTTASWAMY.—Are they yet in the possession of the Government, Sir ?

Sri A. G. RAMACHANDRA RAO.—Yes, they are in the possession of Government.

Sri K. PUTTASWAMY.—Has not one of those buildings been sold by Government, Sir ?

Sri A. G. RAMACHANDRA RAO.—Notice.

ಶ್ರೀ ಎಲ್. ಸಿದ್ದಪ್ಪ.—ಹಿಂದಿನ ಮುಖ್ಯ ಮಂತ್ರಿಗಳಾಗಿದ್ದ ಚೆಂಗಲರಾಯರೆಡ್ಡಿಯವರು ವರದಿ ಬಂದೊಡನೆ ಅದನ್ನು ಸಭೆಯ ಮುಂದಿಡುವುದಾಗಿ ಭರವಸೆ ಕೊಟ್ಟಿದ್ದುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿಲ್ಲ.

ಶ್ರೀ ಎಲ್. ಸಿದ್ದಪ್ಪ.—ಈಗ ಈ ವರದಿಯನ್ನು ಪಬ್ಲಿಷ್ ಮಾಡುವುದರಲ್ಲಿ ಆಕ್ಷೇಪವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ಯೋಚನೆ ಮಾಡುತ್ತಿದ್ದೇವೆ. ಒಂದು ವಿಷಯ ಹೇಳಬೇಕಾದರೆ, ಇನ್ನೂ ಕೆಲವು ಕೇಸುಗಳು ಗೋಪಾಲರಾವ್ ಮೇರೆ ನಡೆಯುತ್ತಿವೆ, ಆದ್ದರಿಂದ ಈ ವಿಚಾರ ಪ್ರಸ್ತಾಪಿಸುವುದು ಸೂಕ್ತವೆ ಎಂದು ಯೋಚನೆ ಮಾಡುತ್ತಿದ್ದೇವೆ.

———

T.A. and D.A. drawn by Ministers.

Q.—450. **Sri A. BHEEMAPPA NAIK** (Molakalmuru).—

Will the Government be pleased to state :—

(*a*) the amount of T.A. and D.A. drawn by each Minister from 1st April 1952 to 31st Jaunuary 1953 ;

(*b*) the amount spent for repairs of the vehicles used by each Minister ?

A.—**Sri A. G. RAMACHANDRA RAO** (Minister for Law and Education) [on behalf of Sri K. Hanumanthaiya (Chief Minister].—

(*a*) The Chief Minister—

T.A.	D.A
Rs. 6,014-3-0	Rs. 1,451-14-0

The Minister for Industries—

T.A.	D.A.
Rs. 3,177-11-0	Rs. 846-5-0.

The Minister for Law and Education—

T.A.	D.A.
Rs. 5,020-9-0	Rs. 718-5-0

The Minister for Public Health and Local Self-Government—

T.A.	D.A.
Rs. 3,778-3-0	Rs. 401-11-0

The Minister for Revenue and Public Works—

T.A.	D.A.
Rs. 3,848-14-0	Rs. 368-8-0

The Minister for Home Affairs and Agriculture—

T.A.	D.A.
Rs. 6,192-2-0	Rs. 1,111-9-0

(*Note.*—The figures show the expenditure for 10 months only—April 1952 to end of January 1953.)

(*b*) The amount spent for repairs of cars used by Ministers is shown against each Minister in the statement below :—

	Rs.	a.	p.
The Chief Minister ...	430	0	0
The Minister for Industries.	156	5	3
The Minister for Law and Education.	58	2	40